SRI AZEEZ SAIT (Minister For Revenue).—Mr. Speaker, Sir, I wish to make the following.

ಸರ್ಕಾರಿ ಜಮೀನುಗಳ ಅನಧಿಕೃತ ಸಾಗುವಳಿಗಳು ಹಾಗೂ ಕಟ್ಟಡಗಳನ್ನು ಸಕ್ರಮಗೊಳಿಸಲು ಈಗಿರುವ ಕಾಯಿದೆಗಳಲ್ಲಿ ಅವಕಾಶವಿರುವುದಿಲ್ಲ. ಸರ್ಕಾರಿ ಜಮೀನುಗಳ ಅನಧಿಕೃತ ಸಾಗುವಳಿಯನ್ನು ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಿದ ನಂತರವೇ ಸಕ್ರಮಗೊಳಿಸಲು ಸಾಧ್ಯವಿರುತ್ತದೆ. ಆದುದರಿಂದ ಸರ್ಕಾರವು ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಲು ಉದ್ದೇಶಿಸಲಾಗಿದೆ. ಈ ಬಗ್ಗೆ ಕರಡು ವಸೂದೆಯನ್ನು ಸದನದಲ್ಲಿ ಮಂಡಿಸಲು ಉದ್ದೇಶಿಸಿದೆ. ಆದ್ದರಿಂದ ಉಲ್ಲಾಳ ಗ್ರಾಮದಲ್ಲಿನ ಅನಧಿಕೃತ ಸಾಗುವಳಿಗಳ ಕಟ್ಟಡಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ ೯೪ಕ್ಕೆ ತಿದ್ದುಪಡಿಯನ್ನು ಮಾಡುವವರೆಗೆ ಕಾಯಬೇಕಾಗಿದೆ.

ವಿತ್ತೀಯ ಕಾರ್ಯಕಲಾಪಗಳು

SRI M. RAJASEKHARAMURTHY (Minister For Finance).—Sir, on the recommendation of the Governor I beg to move.—

That the Supplimentary Demands for grants (First Instalment) for the year 1989-90 be taken into considaration)

The question was proposed

೧೯೮೯ ಮತ್ತು ೧೯೯೦ನೇ ಸಾಲಿನ ಅನುಪೂರಕ ಅನುದಾನಗಳ ಮೇಲಿನ ಚರ್ಚೆ ಮತ್ತು ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜುಗಳ ಮೊದಲನೇ ಕಂತು ಎಂದು ಹೇಳಿದ್ದಾರೆ. ಯಾವುದೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಪೂರ್ಣ ಪ್ರಮಾಣದ ಆಯವ್ಯಯ ಮಂಡನೆ ಮಾಡುವುದು ಕಷ್ಟವಾಗುತ್ತದೆ ಎಂಬ ಮಾತನ್ನು ಒಪ್ಪಿಕೊಳ್ಳುತ್ತೇನೆ ಹಾಗೆಯೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಕೇಂದ್ರಸರ್ಕಾರದಿಂದ ಬರಬಹುದಾದ, ಬರಬೇಕಾದ ಅಥವಾ ಹೊಸ ಹೊಸ ಕಾರ್ಯಕ್ರಮಗಳನ್ನು ಅವರು ಏನು ಹಾಕಿಕೊಂಡಿರುತ್ತಾರೆ ಅದಕ್ಕೆ ಪೂರಕವಾಗಿ ರಾಜ್ಯ ಬಜೆಟ್ ಹೊಂದಿಕೊಂಡಿರುವುದರಿಂದ ಸ್ವಲ್ಪ ಸಮಯ ಬೇಕಾಗುತ್ತದೆ ಎಂಬ ಮಾತನ್ನು ಒಪ್ಪುತ್ತೇನೆ. ಆದರೆ ಪೂರಕ ಅಂದಾಜುಗಳ ಮೊದಲನೇ ಕಂತು ಎಂದು ಹೇಳಿದರೆ ಮತ್ತೊಂದು ಎರಡನೇ ಕಂತು ಬರುತ್ತದೆಯೇ ಎನ್ನುವ ಶಂಕೆ ಬರುತ್ತದೆ. ಅಥವಾ ಪೂರ್ಣ ಪ್ರಮಾಣದ ಬಜೆಟ್ಟೇ ಬರುತ್ತದೆಯೇ? ನಮ್ಮ ಸದನದಲ್ಲಿ ಆರ್ಥಿಕ ತಜ್ಞರು ಬಹಳ ಜನ ಇದ್ದಾರೆ. ಮಾನ್ಯ ಹಿಂದಿನ ಅರ್ಥ ಮಂತ್ರಿಗಳು ಮತ್ತು ಇಂದಿನ ಶಾಸನ ಸಭೆಯ ಸದಸ್ಯರಾದ ಶ್ರೀ ಪೊನ್ನಪ್ಪನವರು ಇದ್ದಾರೆ.

೧-೦೦ ಪಿ.ಎಂ.

ಮಾನ್ಯ ವೀರಪ್ಪ ಮೊಯಿಲಿಯವರೂ ಇದ್ದಾರೆ, ಮತ್ತು ಇನ್ನು ಅನೇಕ ಜನ ಮಂತ್ರಿಗಳು ಇದ್ದಾರೆ. ನನಗೆ ತಿಳಿದಹಾಗೆ, ಎರಡನೆಯ ಕಂತು ಎಂದು ಹೇಳುವುದು ಎಲ್ಲೂ ಇಲ್ಲ. ಎರಡನೇ ಕಂತಿನ ಮತ್ತೊಂದು ಪೂರಕ ಬಜೆಟ್ ಬರುತ್ತದೆ ಎಂದು ಹೇಳಿದರೆ, ಇವೆಲ್ಲವನ್ನೂ ತಾವೇನು ಕೇಳಿದ್ದೀರಿ, ಇಲಾಖೆಗಳು, ನಾಗರಿಕ ಸರ್ಕಾರ ಖರ್ಚುಮಾಡಿದಂಥ ಅಥವಾ ಖರ್ಚು ಮಾಡ ಬೇಕಾಗಿದ್ದಂಥಹ ಪಾಗೂ ಇವೆಲ್ಲವೂ ಹಿಂದಿನದಕ್ಕೆ ಸೇರಿದ್ದು ಎಂದು ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಂಬರ್ ೧ ಮತ್ತು ೨ ಇದು ಎಲ್ಲಾ ಕಾಲದಲ್ಲೂ ಇದೆ, ಇದಂ ತವಶ್ಯ ಕಾಲದಲ್ಲೂ ಇತ್ತು, ಕಂಟಿಂಜೆನ್ಸೀಸ್ ವೆಚ್ಚವನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಇದು ಮೊದಲನೇ ಕಂತು ಎಂದು ಹೇಳಿದರೆ, ಎರಡನೇ ಕಂತು ಇದೆಯೇ ಎಂದು ಕೇಳಿದೆ. ಇದರ ಅರ್ಥ ಎರಡನೇ ಕಂತು ಇದೆಯೆಂದು ಗೊತ್ತಾಗುತ್ತದೆ. ಕಳೆದ ೮೯ ತಿಂಗಳಿಂದ ರಾಜ್ಯದಲ್ಲಿ ನಾಗರೀಕ ಸರ್ಕಾರ ಇರಲಿಲ್ಲ, ರಾಜ್ಯಪಾಲರ ಆಡಳಿತ ಇತ್ತು. ಸಿವಿಲ್ ಗವರ್ನ ಮೆಂಟ್ ಎಂದು ಹೇಳಿದರೆ ನಾಗರೀಕ ಸರ್ಕಾರ, ಚುನಾಯಿತ ಸರ್ಕಾರ ಇರಲಿಲ್ಲ. ಸಾಧಾರಣ ಭಾಷೆಯಲ್ಲಿ ನಾಗರೀಕ ಸರ್ಕಾರ ಎಂದು ಹೇಳುತ್ತೇವೆ, ಇದರ ಅರ್ಥ ಅನಾಗರೀಕ ಸರ್ಕಾರ ಎಂದಲ್ಲ. .....

ಅಧ್ಯಕ್ಷರು.—ನಿಮ್ಮ ಭಾಷಾಂತರ ಸರಿಹೋಗುವುದಿಲ್ಲ. ರಾಷ್ಟ್ರಪತಿಯವರ ಆಳ್ವಿಕೆ ಇತ್ತು ಎಂದು ಹೇಳಿ ನಾಗರೀಕ, ಅನಾಗರೀಕ ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಸರಳವಾದ ಭಾಷೆಯಲ್ಲಿ ನಾಗರೀಕ ಸರ್ಕಾರ ಎಂದು ಹೇಳುತ್ತೇವೆ. ಇದು ಬೇಡ ಎಂದು ಹೇಳಿದರೆ ಬೇರೆ ಭಾಷೆಯನ್ನು ಬಳಸೋಣ. ಈ ಆಯವ್ಯಯದ ಬಗ್ಗೆ ಕೇಂದ್ರದಲ್ಲಿ ಸಂಸತ್ತಿನಲ್ಲಿ ನಾವು ಚರ್ಚೆ ಮಾಡಿದ್ದೇವೆ. ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದು ಅನಿವಾರ್ಯ ಎನ್ನುವ ಕಾರಣದಿಂದ ಇದರ ಬಗ್ಗೆ ನಮ್ಮದೇನೂ ವಿಪರೀತ ಚರ್ಚೆಯೂ ಇಲ್ಲ, ತಕರಾರೂ ಇಲ್ಲ. ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಮಾಡುತ್ತೇನೆ. ಹಿಂದಿನ ಜನತಾ ದಳ ಸರ್ಕಾರ, ಸರ್ಕಾರವನ್ನು ದಿವಾಳಿ ಮಾಡಿದರು. ಸಾಧಾರಣವಾದ ಬಿಲ್ಲುಗಳೂ ಪಾಸ್ ಆಗುತ್ತಾ, ಇರಲಿಲ್ಲ, ವಿಶ್ರಾಂತಿವೇತನ ಸಿಕ್ಕುತ್ತಾ ಇರಲಿಲ್ಲ, ಸಾಮಾಜಿಕ ನ್ಯಾಯವನ್ನು ಒದಗಿಸುವ ಮಾತನ್ನು ಗ್ರಾಮೀಣ ಪ್ರದೇಶಗಳಲ್ಲಿ ಹೋದಾಗ ಹೇಳಿರಬಹುದು. ಇದು ಅವರಿಗೆ ಅನುಕೂಲವಾಗಿರಬಹುದು. ಆದ್ದರಿಂದ, ದಕ್ಕೆ ಹೆಚ್ಚಿನ ಅರ್ಥತೆಯನ್ನು ಕೊಡಬೇಕೆಂದು ಹೇಳಿ ಅವರನ್ನು ಪ್ರಾರ್ಥನೆ ಮಾಡುತ್ತಾ, ಈ ಮಾತುಗಳನ್ನು ಬೇರೆಯವರು ಹೇಳಿದ್ದರೆ ಈ ಪ್ರಶ್ನೆ ಕೇಳುತ್ತಾ ಇರಲಿಲ್ಲ. ರಾಜ್ಯದ ಅರ್ಥಮಂತ್ರಿಯಾಗಿದ್ದಂಥ ಮಾನ್ಯ ವೊಯಿಲಿಯವರು ಇಂತಹ ಹೇಳಿಕೆ ಕೊಟ್ಟರು, ಖಜಾನೆ ಖಾಲಿ ಆಗಿದೆ ಎಂದು ಹೇಳಿದರು. ಸಾರ್ವಜನಿಕ ಭಾಷಣ ಮಾಡುವುದು ಸುಲಭ, ಇದನ್ನು ಸದನದಲ್ಲಿ ಸಾಬೀತು ಮಾಡಬೇಕಾಗುತ್ತದೆ. ಸಾಬೀತು ಮಾಡುವಾಗ, ೧೯೮೮-೮೯, ೧೯೮೯-೯೦ ಮತ್ತು ೧೯೯೦-೯೧ ಈ ಮೂರು ವರ್ಷಗಳಿಂದ ಒಟ್ಟಾರೆ ಸಾದಿಲ್ವಾರು ಲೆಕ್ಕಚಾರಗಳನ್ನು ನೋಡಿ, ಒಂದು ಶ್ವೇತ ಪತ್ರವನ್ನು ಪ್ರಕಟಣೆ ಮಾಡಿದರೆ ಒಳ್ಳೆಯದು. ಇದರಿಂದ ಸಾರ್ವಜನಿಕ ಭಾಷಣ ಮಾಡಿದ್ದಕ್ಕೂ, ಶಾಸನಸಭೆಯಲ್ಲಿ ಹೇಳುವುದಕ್ಕೂ ಸಂಬಂಧ ಕಲ್ಪಿಸಿದಂತಾಗುತ್ತದೆ. ಹೀಗೆ ಸಂಬಂಧ ಕಲ್ಪಿಸುವುದು ಸಾಧ್ಯವಿಲ್ಲ ಎಂದು ಇಲ್ಲ. ಇದರಿಂದ ಜನರಿಗೆ ತಪ್ಪು ದಾರಿಗೆ ಎಳೆಯಲು ಅವಕಾಶವಾಗುತ್ತದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡದೇ, ಪೂರಕ ಅಂದಾಜುಗಳನ್ನು ನಾವು ಮಂಜೂರು ಮಾಡುತ್ತಿದ್ದೇವೆ, ಈ ಮಂಜೂರಾತಿಯ ಸಮಯದಲ್ಲಿ, ಮೂರು ವರ್ಷಗಳಿಗೆ ಸಂಬಂಧಪಟ್ಟಂಥ ಒಂದು ಶ್ವೇತಪತ್ರವನ್ನು ಹೊರಡಿಸುವಂತೆ ಆಶ್ವಾಸನೆಯನ್ನು ಮಾನ್ಯ ಅರ್ಥಸಚಿವರು ಈ ಸದನದಲ್ಲಿ ಕೊಡಬೇಕು. ಮುಖ್ಯಮಂತ್ರಿಗಳೂ ಕೂಡ ಸಾರ್ವಜನಿಕವಾಗಿ ವಿಚಾರಗಳನ್ನು ಹೇಳುತ್ತಾರೆ. ಚುನಾವಣೆಯ ಕಾಲದಲ್ಲಿ ಸಾರ್ವಜನಿಕವಾಗಿ ನಾವೆಲ್ಲರೂ ಹೇಳಿದ್ದೇವೆ. ನಿಜವಾಗಿಯೂ ಅರ್ಥಗರ್ಭಿತವಾಗಿ, ಶಾಸಕರಿಗೆ ತಿಳಿಯಬೇಕಾದರೆ, ಹುರುಳಿದೆ ಎಂದು ಭಾವಿಸಿದ್ದೇ ಆದರೆ, ಇಂತಹ ಶ್ವೇತಪತ್ರವನ್ನು ಹೊರಡಿಸಬೇಕೆಂದು ತಮ್ಮಮೂಲಕ ಅರ್ಥಮಂತ್ರಿಗಳನ್ನು ಪ್ರಾರ್ಥನೆ ಮಾಡಿ, ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲೆ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆ ಇಲ್ಲ ವೆಂದು ಭಾವಿಸಿ, ನನ್ನದೇನೂ ತಕರಾರು ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಸ್ವಾಮಿ, ವಿರೋಧಪಕ್ಷದ ನಾಯಕರು ಈ ಬೇಡಿಕೆಗಳಿಗೆ ತಮ್ಮ ಸಂಪೂರ್ಣವಾದ ಬೆಂಬಲ ಕೊಟ್ಟದ್ದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ೧೯೮೮-೮೯, ೮೯-೯೯, ೯೯-೯೦ ಈ ಮೂರು ವರ್ಷಗಳಿಗೆ ಸಂಬಂಧಪಟ್ಟಹಾಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಬೇಕೆಂದು ಅವರು ಹೇಳಿದ್ದಾರೆ. ಅವರು ಹೇಳಿದಹಾಗೆ ಚುನಾವಣೆಯ ಕಾಲದಲ್ಲಿ ಭಾಷಣ ಮಾಡಿದಂಥ ಸಂದರ್ಭದಲ್ಲಿ, ಆ ಸನ್ನಿವೇಶ ಬಂದಾಗ, ಜನತಾ ಸರಕಾರದವರು ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸಿದ್ದಾರೆ ಎಂದು ಅನೇಕರು ಭಾಷಣ ಮಾಡಿದ್ದಾರೆ. ಈ ಹೇಳಿಕೆ ಏನಿದೆ ಅದನ್ನೂ, ಈ ಶ್ವೇತಪತ್ರದಲ್ಲಿ ಏನಂ ಬರುತ್ತದೆ ಅದನ್ನು ಹೋಲಿಸಿ ನೋಡಿದರೆ ಈ ಅಂಶ ಇದಯೇ ಇಲ್ಲವೇ ಎಂಬ ವಿಚಾರ ಜನಗಳಿಗೆ ತಿಳಿಯಬೇಕೆಂಬ ದೃಷ್ಟಿಯಿಂದ ಶ್ವೇತಪತ್ರ ಬೇಕೆಂದು ಅವರು ಹೇಳಿದ್ದಾರೆ. ಸ್ವಾಮಿ ನಾನು ಈ ವಿಚಾರವನ್ನು ಕೂಲಂಕಷವಾಗಿ ವಿಚಾರ ಮಾಡಿದ್ದೇನೆ. ಹಣಕಾಸಿನ ಪರಿಸ್ಥಿತಿಯನ್ನು ಸಾಕಾದಷ್ಟು ಅಧ್ಯಯನ ಮಾಡಿರುತ್ತೇನೆ. ಈ ರೀತಿ ಮಾಡಿ, ಒಂದು ಸ್ಟೇಟ್‌ಮೆಂಟನ್ನು ಈ ಸದನದ ಮುಂದೆ ಇಡಬೇಕೆಂದು ನಾನು ಈಗಾಗಲೇ ಒಂದಂ ಕಾರ್ಯಕ್ರಮ ತೆಗೆದುಕೊಂಡಿದ್ದೇನೆ. ಇದರ ಬಗ್ಗೆ ಲೆಜಸ್ಲೇಚರ್ ಸೆಕ್ರೆಟೇರಿಯೇಟ್‌ಗೆ ೨೨ನೇ ತಾರೀಖಿಂ ಈ ಹೇಳಿಕೆಯನ್ನು ಇಡುತ್ತೇನೆ ಎಂದು ಒಂದು ಕಾಗದವನ್ನೂ ಕೂಡಾ ನಾನು ಬರೆದಿದ್ದೇನೆ. ಅದರಲ್ಲಿ ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನೇನು ಇದೆ ಎಂಬುದನ್ನು ನಾನಂ ವಿವರಿಸಿದ್ದೇನೆ. ಒಂದಂ ಮಾತ್ರ ಅವರಿಗೆ ಹೇಳುತ್ತೇನೆ. ನಾನು ಇಡತಕ್ಕಂಥ ಸ್ಟೇಟ್‌ಮೆಂಟ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಏನಿದೆ ಅದು ಸ್ಟೇಟ್‌ಮೆಂಟ್ ಆಫ್ ಫ್ಯಾಕ್ಟ್ಸ್ ಆಗಿರುತ್ತದೆ. ಯಾರ ಮುಖಕ್ಕೆ ಮಸಿ ಬಳಿಯುವುದಕ್ಕಾಗಲೀ ಯಾರನ್ನು ಹೊಗಳುವುದಕ್ಕಾಗಲೀ ನಾನು ಇದನ್ನು ಇಡುತ್ತಿಲ್ಲ. It is a statement of facts, which ought to be in proper form so that Hon' Members and the public can draw inference out of it. ಅದನ್ನು ನಾನು ಇಡುತ್ತೇನೆ. ತಾವು ಈ ಬೇಡಿಕೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಕ್ಕಾಗಿ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

"೧೯೮೯-೯೦ನೇ ಸಾಲಿನ ಅನುಪೂರಕ ಅನುದಾನಗಳ (ಮೊದಲನೆ ಕಂತು) ಬೇಡಿಕೆಗಳಿಗೆ ಮಂಜೂರಾತಿ ನೀಡುವುದು".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ೧೯೮೯-೯೦ನೇ ಸಾಲಿನ ಅನುಪೂರಕ ಅನುದಾನಗಳ (ಮೊದಲನೇ ಕಂತು) ಬೇಡಿಕೆಗೆ ಮಂಜೂರಾತಿ ನೀಡಲಾಯಿತು.)

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ ರಾಜ್ಯ ವಿಧಾನ ಮಂಡಲದಲ್ಲಿ ಕರ್ನಾಟಕದ ರಾಜ್ಯಪಾಲರು ಮಾಡಿದ ಭಾಷಣದ ವಂದನಾ ನಿರ್ಣಯದ ಮೇಲೆ ನನ್ನ ಆನಿಸಿಕೆಗಳನ್ನು ಹೇಳಬೇಕೆಂದು ತಮ್ಮ ಅನುಮತಿಯನ್ನು ಪಡೆದು ಎದ್ದು ನಿಂತಿದ್ದೇನೆ. ಒಟ್ಟಾರೆ ಈ ಭಾಷಣವನ್ನು ನೋಡಿದಾಗ ನನಗನಿಸಿದ್ದು ಅಪೂರ್ಣವಾದ, ತಾತ್ಕಾಲಿಕವಾದ, ಮತ್ತು ಮಧ್ಯಂತರವಾದ ಮಂತ್ರಿಮಂಡಲ, ಅವಸರಅವಸರವಾಗಿ ತಯಾರಿಸಿದ ನೀರಸವಾದ ರಾಜ್ಯಪಾಲರ ಭಾಷಣವೆಂದು ಹೇಳಿದರೆ ವಿಧಿ ಇಲ್ಲ. ರಾಜ್ಯಪಾಲರ ಭಾಷಣಕ್ಕೆ ಎಷ್ಟು ಮಾನ್ಯತೆ ಎಷ್ಟು ಗೌರವ ಸಲ್ಲಬೇಕಾಗಿತ್ತೋ ಅದನ್ನು ಈ ಮಂತ್ರಿಮಂಡಲ ಸಲ್ಲಿಸಿಲ್ಲವೆಂದು ಆರೋಪ ಮಾಡುತ್ತೇನೆಂದು ಈ ಸರ್ಕಾರ ಭಾವಿಸಬಾರದು. ಮಂತ್ರಿಮಂಡಲ ನವೆಂಬರ್ ೩೦ನೇ ತಾರೀಖು ವಾಸ್ತವವಾಗಿ ಬಂದರೂ ಕೂಡ ಸರ್ಕಾರ ತನ್ನ ಕಾರ್ಯಾರಂಭ ಮಾಡಿದ್ದುದು ೧೯೮೯ರ ಏಪ್ರಿಲ್ ೨೧ನೇ ತಾರೀಖು. ಈ ಕಾರಣದಿಂದ ಚಾಲ್ತಿ ವರ್ಷದಲ್ಲಿ ಆಗಿರತಕ್ಕಂಥ ಎಲ್ಲಾ ಹಾಗೂಹೋಗುಗಳಿಗೂ ಜವಾಬ್ದಾರಿ, ಹೊಣೆಗಾರಿಕೆಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ. ಇದಕ್ಕೆ ಬಹುಶಃ ನಾನು ಒಂದೆರಡು ಉದಾಹರಣೆಗಳನ್ನು ತಮಗೆ ಹೇಳಬೇಕಾಗುತ್ತವೆ. ರಾಜ್ಯಪಾಲರ ಆಡಳಿತ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಾಗ ಮಾನ್ಯ ರಾಜ್ಯಪಾಲರು ಒಂದು ನಿರ್ಣಯವನ್ನು ತೆಗೆದುಕೊಂಡರು. ಅದು ಬಸ್ ದರ ಏರಿಸತಕ್ಕಂಥ ನಿರ್ಣಯ. ಜೂನ್ ೧೮ನೇ ತಾರೀಖು ಇಂದಿನ ಮುಖ್ಯಮಂತ್ರಿಗಳು ಅಂದಿನ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಆದ ವೀರೇಂದ್ರಪಾಟೀಲ್‌ರವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಅದು ದಿನಾಂಕ ೧೯-೭-೧೯೮೯ರಂದು ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಅದು ಈ ರೀತಿ ಇದೆ.

> "The Governor should not take policy decisions like enhancing bus fares. Karnataka Pradesh Congress (I) President Sri Veerendra Patil said here to-day addressing a Press Conference at Hubli. He said he would like the Governor Sri. P. Venkatasubbaiah to leave all major decisions to an elected Government. He was reacting to the hike in the KSRTC bus fares announced recently."

ಈ ಮಾತನ್ನು ಹೇಳಿದ ತಕ್ಷಣವೇ ರಾಜ್ಯಪಾಲರು ಏರಿಸಿದ್ದ ಬಸ್ ದರಗಳನ್ನು ಹಿಂದಕ್ಕೆ ಪಡೆದರು. ಈ ಮಾತನ್ನು ಹೇಳುವುದಕ್ಕಿಂತ ಮುಂಚಿತವಾಗಿ ಏರಿಸಿದ್ದ ಬಸ್ ದರಗಳ ಟಿಕೇಟ್‌ಗಳನ್ನು ಅಚ್ಚು ಹಾಕಿದ್ದು ಅಚ್ಚಾದ ಟಿಕೇಟ್‌ಗಳು ಎಲ್ಲಾ ವಿಭಾಗಗಳಿಗೂ ಹೋಗಿದ್ದುವು ಎಂದೂ ನಾನು ತಿಳಿದುಕೊಂಡಿದ್ದೇನೆ. ಇಂತಹ ಪಾಲಿಸಿಗಳನ್ನು ತೀರ್ಮಾನ ಮಾಡುವಾಗ, ಕಟ್ಟುನಿಟ್ಟಾಗಿ ಮಾಡುವಾಗ ರಾಜ್ಯಪಾಲರಿಗೆ ಈ ಅಧಿಕಾರ ಇದೆಯೇ ಇಲ್ಲವೇ ಎನ್ನುವುದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಇಲ್ಲಿ ಪ್ರಶ್ನೆ ಮಾಡಬೇಕಾದದ್ದು ಏನೆಂದರೆ ಕನ್ನಡದಲ್ಲಿ ಒಂದು ಗಾದೆ ಇದೆ ಅದೇನೆಂದರೆ ನೀನು ಜಿಗಟಿದ ಹಾಗೆ ಮಾಡು ನಾನು ಅತ್ತ ಹಾಗೆ ಮಾಡುತ್ತೇನೆ ಎಂದು. ಮೊದಲು ಬಸ್ ದರಗಳನ್ನು ಏರಿಸುತ್ತೇವೆಂದು ಹೇಳಿದರು ಈ ಮಾತನ್ನು ಹೇಳಿದ ತಕ್ಷಣವೇ ರಾಜ್ಯಪಾಲರು